17) ಯಲಿಮುನೋಳ್ಳಿ ಹಾಗೂ ಇತರೆ 3 ಗ್ರಾಮಗಳ ನೀರು ಸರಬರಾಜು ಯೋಜನೆ

ರಾಯಭಾಗ : 18) ದಿಗ್ಗೇವಾಡಿ ಹಾಗೂ ಇತರೆ 4 ಗ್ರಾಮಗಳ ನೀರು ಸರಬರಾಜು ಯೋಜನೆ

ಬೈಲಹೊಂಗಲ : 19) ಅಮಟೂರು ಮತ್ತು ಹಾಗೂ ಇತರೆ 19 ಹಳ್ಳಿಗಳಿಗೆ ನೀರು ಸರಬರಾಜು ಯೋಜನೆ

ಸವದತ್ತಿ : 20) ಉಗರಗೋಳ ಹಾಗೂ ಇನ್ನಿತರ 13 ಹಳ್ಳಿಗಳಿಗೆ ನೀರು ಸರಬರಾಜು ಯೋಜನೆ

ಶ್ರೀ ಜಗದೀಶ್ (ವಿರೂಪಾಕ್ಷಿ) ಸಿ. ಮೇಟಗುಡ್ : ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಿದ್ದಾರೆ. 3ನೇ ಪ್ರಶ್ನೆಯಲ್ಲಿ 9 ಕೋಟಿ 20 ಲಕ್ಷ ಈ ಯೋಜನೆಗೆ ಖರ್ಚಾಗಿದೆ ಎಂದು ಹೇಳಿದ್ದಾರೆ. ಆದರೆ ಈಗಾಗಲೇ 12 ಕೋಟಿ ರೂಪಾಯಿ ಮೇಲೆ ಈ ಯೋಜನೆಗೆ ಖರ್ಚಾಗಿದೆ. ನಾಲ್ಕನೇ ಪ್ರಶ್ನೆಯಲ್ಲಿ ಬೇಸಿಗೆ ಕಾಲದಲ್ಲಿ ಕುಡಿಯುವ ನೀರಿನ ಅಭಾವದ ದೃಷ್ಟಿಯಿಂದ ಈ ಯೋಜನೆ ಮುಖಾಂತರ ಸರಬರಾಜು ಮಾಡಬಹುದೇ ಎಂದು ನಾನು ಕೇಳಿದ್ದೆ. ಆದರೆ ಅವರು ಇವತ್ತು ಬೇರೆ ತಾಲ್ಲೂಕು ಮಟ್ಟದ ನೀರಿನ ಸರಬರಾಜಿನ ಬಗ್ಗೆ ಉತ್ತರವನ್ನು ಕೊಟ್ಟಿದ್ದಾರೆ, ಈ ಬೇಸಿಗೆ ಕಾಲದಲ್ಲಿ ಜಾಕ್‌ವೆಲ್ ಏನು ಇದೆ? ಇಲ್ಲಿ ನಾವು ಜಾಕ್‌ವೆಲ್‌ಅನ್ನು ಜಾಲೂ ಮಾಡಬೇಕಾದರೆ ಮಿನಿಮಮ್ 5 ರಿಂದ 6 ಅಡಿ ನೀರು ನದಿಯಲ್ಲಿ ಬೇಕಾಗುತ್ತದೆ. ಆದರೆ ಬೇಸಿಗೆ ಕಾಲದಲ್ಲಿ ಈ ನದಿಯಲ್ಲಿ ಅಷ್ಟೊಂದು ನೀರು ಇರುವುದಿಲ್ಲ. ಆದ ಕಾರಣ ಇವರು 3–4 ತಿಂಗಳು ಈ ಯೋಜನೆಯಿಂದ 19 ಹಳ್ಳಿಗೆ ನೀರು ಕೊಡಲಿಕ್ಕೆ ಆಗುವುದಿಲ್ಲ. ಆದಕ್ಕೆ ಯಾವ ಕ್ರಮವನ್ನು ತೆಗೆದುಕೊಂಡಿದ್ದಾರೆ ಎಂದು ನಾನು ಪ್ರಶ್ನೆ ಕೇಳಿದ್ದೆ. ಅದಕ್ಕೆ ದಯಮಾಡಿ ಮಂತ್ರಿಗಳು ಉತ್ತರಿಸಬೇಕು.

ಶ್ರೀ ಬಿ. ಸತ್ಯನಾರಾಯಣ (ಗ್ರಾಮೀಣ ನೀರು ಸರಬರಾಜು, ನೈರ್ಮಲ್ಯ ಮತ್ತು ಗ್ರಾಮೀಣಾಭಿವೃದ್ಧಿ ಇಂಜಿನಿಯರಿಂಗ್ ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರೇ, ಬೈಲಹೊಂಗಲ ತಾಲ್ಲೂಕಿನ ಅಮಟೂರು ಹಾಗೂ ಇತರೆ ಹಳ್ಳಿಗಳಿಗೆ 2001 ನೇ ಸಾಲಿನಲ್ಲಿ ಸುಮಾರು 920 ಲಕ್ಷದ ಅಂದಾಜಿನಲ್ಲಿ ಒಂದು ಯೋಜನೆಯನ್ನು ಸಿದ್ಧಪಡಿಸಿ ನಮ್ಮ ಲ್ಯಾಂಡ್ ಆರ್ಮಿ ಕಾರ್ಪೊರೇಷನ್‌ನವರು ಆ ಕೆಲಸವನ್ನು ಪ್ರಾರಂಭ ಮಾಡಿದ್ದಾರೆ. ಅದು ಪರಿಷ್ಕೃತಗೊಂಡು 2003 ರಲ್ಲಿ 1125.25 ಲಕ್ಷಕ್ಕೆ ಪರಿಷ್ಕೃತ ಆಗಿದೆ. ಈ ಉದ್ದೇಶಿತ ಯೋಜನೆಯನ್ನು ಏಪ್ರಿಲ್ 2005 ರ ಅಂತ್ಯದಲ್ಲಿ ಪರಿಷ್ಕೃತ ಅಂದಾಜಿನ ಅನ್ವಯ

ಪೂರ್ಣಗೊಳಿಸಿ ಕಾರ್ಯಗತಗೊಳಿಸಲು ಉದ್ದೇಶಿಸಲಾಗಿದೆ. ಅಂದಾಜಿಗೆ ರಾಜ್ಯಮಟ್ಟದ ಎಂಪವರ್‌ಸಮಿತಿಯಿಂದ ಈಗಾಗಲೇ ಅದಕ್ಕೆ ಅನುಮತಿ ನೀಡಿದ್ದೇವೆ. ಆದಷ್ಟು ಬೇಗ ಏಪ್ರಿಲ್ ತಿಂಗಳಲ್ಲಿ ಆ ಕಾರ್ಯವನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಬೇಗ ಪ್ರಶ್ನೆ ಕೇಳಿ. ಒಂದೆರಡು ಪ್ರಶ್ನೆ ಕೇಳಿ.

ಶ್ರೀ ಜಗದೀಶ್ (ವಿರೂಪಾಕ್ಷ) ಸಿ. ಮೇಟಗುಡ್ : ಈ ಏಪ್ರಿಲ್‌ನಲ್ಲಿ, ಬೇಸಿಗೆ ಕಾಲದಲ್ಲಿ ಅಲ್ಲಿ ನೀರೇ ನಿಲ್ಲುವುದಿಲ್ಲ. ಅದರಿಂದ ಈ ಜಾಕ್‌ವೆಲ್‌ನಿಂದಾಗಿ 19 ಹಳ್ಳಿಗಳಿಗೆ ನೀರು ಕೊಡಲಿಕ್ಕೆ ಆಗುವುದಿಲ್ಲ ಆದ್ದರಿಂದ ದಯಮಾಡಿ ಸರ್ಕಾರ ಈಗಾಗಲೇ 12 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದೆ. ಅದಕ್ಕಾಗಿ ಆ ನದಿಗೆ ಒಂದು ಬ್ಯಾರೇಜ್ ಕಟ್ಟಿದರೆ ಮಾತ್ರ ಅನುಕೂಲ ಆಗುತ್ತದೆ. ದೀಡ್‌ದಿಂದ ಎರಡು ಕೋಟಿ ರೂಪಾಯಿ ಖರ್ಚು ಮಾಡಿದರೆ ಮಾತ್ರ ಈ 19 ಹಳ್ಳಿಗಳಿಗೆ ಬೇಸಿಗೆ ಕಾಲದಲ್ಲಿ ನೀರು ಕೊಡಲಿಕ್ಕೆ ಸಾಧ್ಯವಾಗುತ್ತದೆಂದು ನಾನು ಹೇಳಬಯಸುತ್ತೇನೆ. ಆಮೇಲೆ ಇನ್ನೊಂದು ವಿಚಾರ, ಇಂತಹ ಯೋಜನೆಗಳು, ರಾಜೀವ್ ಗಾಂಧಿ ಯೋಜನೆಗಳು ನಮ್ಮ ನರಗುಂದದಲ್ಲಿ ಆಗಿದೆ, ಸವದತ್ತಿಯಲ್ಲೂ ಆಗಿದೆ, ಲ್ಯಾಂಡ್ ಆರ್ಮಿಯವರು ಒಂದು ವರ್ಷ ಮೇಂಟೆನೆನ್ಸ್‌ಗೆ ತೆಗೆದುಕೊಳ್ಳುತ್ತಾರೆ. ಆಮೇಲೆ ಗ್ರಾಮ ಪಂಚಾಯತಿಗೆ ಅದನ್ನು ಹ್ಯಾಂಡ್‌ಓವರ್ ಮಾಡುತ್ತಾರೆ. ಆದರೆ ಇವತ್ತಿನ ಕಾಲದಲ್ಲಿ ಗ್ರಾಮ ಪಂಚಾಯಿತಿಯಲ್ಲಿ ಒಂದು ಲೈಟ್ ಹಾಕಲಿಕ್ಕೆ ಅವರಿಗೆ ಶಕ್ತಿ ಇಲ್ಲ, ಒಂದು ಪಂಚಾಯತಿಗೆ ಲಕ್ಷಗಟ್ಟಲೆ ಎಲೆಕ್ಟ್ರಿಸಿಟಿ ಬಿಲ್ ಬರುತ್ತದೆ ಮತ್ತು ಮೇಂಟೆನೆನ್ಸ್, ಈ ಪಂಚಾಯತಿಗೆ ಆಗುವ ಹಾಗೆ ಇಲ್ಲ, ಈ ಕಾರಣ, ಇಂತಹ ಎರಡು ಮೂರು ಯೋಜನೆಗಳು ನರಗುಂದ ಮತ್ತು ಸವದತ್ತಿಯಲ್ಲಿ ಬಂದ ಆಗಿದ್ದಾರೆ, ಅದಕ್ಕೆ ದಯಮಾಡಿ ಇದಕ್ಕೆ ಏನಾದರೂ ಬಿಜೆಪಿಗೆ ಆಗಲೀ ಅಥವಾ ಬೇರೆ ಸರ್ಕಾರಕ್ಕೆ ಆಗಲೀ ಅಥವಾ ಪ್ರೈವೇಟ್ ಕಂಪನಿಗೆ ಇದರ ಮೇಂಟೆನ್ ಮಾಡಲಿಕ್ಕೆ ಬೇಕು ಎಂದು ತಮ್ಮ ಮೂಲಕ ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ಇದಕ್ಕೆ ಅವರು ಏನು ಕ್ರಮ ತೆಗೆದುಕೊಳ್ಳುತ್ತಾರೆ ಎಂದು ತಿಳಿಸಬೇಕು.

ಶ್ರೀ ಬಿ. ಸತ್ಯನಾರಾಯಣ : ಈ ಯೋಜನೆ ರೂಪಿಸಿರತಕ್ಕದ್ದು, ನೀರು ಇಲ್ಲದೇ ನಿರರ್ಥಕ ಆಗುತ್ತಿದೆ. ಈ ಸಾರಿ ನೀರು ಕೊಡುವುದಕ್ಕೆ ಆಗುವುದಿಲ್ಲ ಎನ್ನುವ ಮಾತನ್ನು ಮಾನ್ಯ ಶಾಸಕರು ಹೇಳುತ್ತಿದ್ದಾರೆ. ಆದರೆ ಸುಮಾರು 1125 ಲಕ್ಷ ರೂಪಾಯಿಗಳನ್ನು

ಖರ್ಚು ಮಾಡಿ ಮಾಡಿರತಕ್ಕಂಥ ಯೋಜನೆ, ಅದು ಶಾಶ್ವತವಾದ ಯೋಜನೆ ಆಗಿರಲೇಬೇಕು. ಆ ರೀತಿ ನೀರಿನ ತೊಂದರೆ, ಲಭ್ಯತೆ ಕಡಿಮೆ ಆಗಿದ್ದಲ್ಲಿ, ಸ್ಟೋರೇಜ್ ಡ್ಯಾಮ್ ಕಟ್ಟಿಕೊಂಡು ನೀರು ಕೊಡುವುದಕ್ಕೆ ವ್ಯವಸ್ಥೆ ಮಾಡಿಕೊಡಬೇಕೆಂದು ಕೇಳಿದ್ದಾರೆ. ಅದರ ಬಗ್ಗೆ ಸೂಕ್ತವಾದ ಒಂದು ನಿರ್ಧಾರವನ್ನು ಸರ್ಕಾರವು ತೆಗೆದುಕೊಳ್ಳುತ್ತದೆ ಎನ್ನುವ ಮಾತನ್ನು ತಮ್ಮ ಮೂಲಕ ಅವರಿಗೆ ತಿಳಿಸಲು ಇಚ್ಛೆಪಡುತ್ತೇನೆ.

ಅಧ್ಯಕ್ಷರು: ದಯಮಾಡಿ ನೀವು ಕುಳಿತುಕೊಳ್ಳಬೇಕು. ನಾನು ಈಗ ಮಾನ್ಯ ಸದಸ್ಯರಾದ ಜಗದೀಶ್ ಶೆಟ್ಟರ್ ಅವರನ್ನು ಕರೆದಿದ್ದೇನೆ. No, I have not allowed.

ಒಬ್ಬ ಮಾನ್ಯ ಸದಸ್ಯರು : ನಾವು ಕೇಳುವ ಎಲ್ಲದಕ್ಕೂ ನೀವು ಹೀಗೆ ಹೇಳಿದರೆ ಹೇಗೆ? ನಮ್ಮ ಯಾವುದೇ ಪ್ರಶ್ನೆಗಳಿಗೂ ಸರಿಯಾದ ಉತ್ತರ ಸಿಗುತ್ತಿಲ್ಲ.

ಅಧ್ಯಕ್ಷರು : ಮಾನ್ಯ ಸದಸ್ಯರು ತಮಗೆ ಇಷ್ಟ ಬಂದ ರೀತಿಯಲ್ಲಿ ಎದ್ದು ನಿಂತು ಮಾತನಾಡುವುದು ಸರಿಯಲ್ಲ, ಈಗ ನಾನು ಜಗದೀಶ್ ಶೆಟ್ಟರ್ ಅವರನ್ನು ಕರೆದಿದ್ದೇನೆ.

ಒಬ್ಬ ಮಾನ್ಯ ಸದಸ್ಯರು : ಯೋಜನೆ ಬಂದ್ ಆಗಿದೆಯೆಂದು ಏನು ಹೇಳುತ್ತಿದ್ದಾರೆ. ಕಳೆದ ಏಳು ತಿಂಗಳುಗಳಿಂದ ಪಗಾರ ಕೊಡುತ್ತಿಲ್ಲ.

ಅಧ್ಯಕ್ಷರು : ಈ ವಿಷಯದ ಮೇಲೆ ಅರ್ಧ ಗಂಟೆ ಚರ್ಚೆಗೆ ಅವಕಾಶ ಕಲ್ಪಿಸಿಕೊಡಲಾಗಿದೆ. ಮಾತನಾಡಲು ಎಲ್ಲರೂ ಹೀಗೆ ಒಟ್ಟಿಗೆ ಎದ್ದು ನಿಂತುಕೊಂಡರೆ ಹೇಗೆ?

ಒಬ್ಬ ಮಾನ್ಯ ಸದಸ್ಯರು ; ಇದು ಕುಡಿಯುವ ನೀರಿನ ಸಮಸ್ಯೆ.

ಅಧ್ಯಕ್ಷರು ; ಮಾನ್ಯ ಜಗದೀಶ್ ಶೆಟ್ಟರ್‌ರವರೆ, ಈಗ ನೀವು ಪ್ರಶ್ನೆ ಕೇಳುತ್ತೀರೋ? ಇಲ್ಲವೋ? ನೀವು ಪ್ರಶ್ನೆ ಕೇಳದಿದ್ದರೆ ಮುಂದಿನ ಪ್ರಶ್ನೆ ತೆಗೆದುಕೊಳ್ಳುತ್ತೇನೆ, ಇದನ್ನು ಸಹಿಸಿಕೊಳ್ಳುವುದಕ್ಕಾಗುವುದಿಲ್ಲ.

ಶ್ರೀ ಜಗದೀಶ್ ಶೆಟ್ಟರ್ : ಅವರು ಮಾತನಾಡುತ್ತಿದ್ದರೆ ನಾವು ಹೇಗೆ ಪ್ರಶ್ನೆ ಕೇಳುವುದಕ್ಕಾಗುತ್ತದೆ?

ಅಧ್ಯಕ್ಷರು ; ಕುಡಿಯುವ ನೀರಿನ ಸಮಸ್ಯೆ ಬಹಳ ಗಂಭೀರವಾದುದು. ಅದಕ್ಕೋಸ್ಕರ, ಮಧ್ಯಾಹ್ನ ಅರ್ಧ ಗಂಟೆ ಕಾಲ ಚರ್ಚೆಗೆ ಅವಕಾಶ ಕಲ್ಪಿಸಿಕೊಟ್ಟಿದ್ದೇನೆ. ಇಲ್ಲದಿದ್ದರೆ, ಈ ಅಧಿವೇಶನ ಜರುಗಲಿರುವ 31ನೇ ತಾರೀಖಿನವರೆಗೂ ಇದೊಂದೇ ವಿಷಯದ ಮೇಲೆ ಚರ್ಚಿಸಬೇಕಾಗುತ್ತದಷ್ಟೆ. ಇದರಲ್ಲಿ ಏನು ಅರ್ಥವಿದೆ? ದಯಮಾಡಿ ತಾವೆಲ್ಲರೂ ಅರ್ಥಮಾಡಿಕೊಳ್ಳಬೇಕು. ಜಗದೀಶ್ ಶೆಟ್ಟರ್‌ರವರೆ, ಈಗ ತಾವು ಪ್ರಶ್ನೆ ಕೇಳಿ.

158 (2254) **ಶ್ರೀ ಜಗದೀಶ್ ಶೆಟ್ಟರ್** (ಹುಬ್ಬಳ್ಳಿ ಗ್ರಾಮೀಣ) ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :-

ಅ) ರಾಜ್ಯದಲ್ಲಿರುವ ಗ್ರಾಮಪಂಚಾಯತಿಗಳಿಗೆ ಕಳೆದ 3 ವರ್ಷಗಳಿಂದ (2004-05) ನ್ನು ಸೇರಿ ನಿಗಧಿಪಡಿಸಿದ ಬಿಡುಗಡೆ ಮಾಡಿದ ಹಣವೆಷ್ಟು? ವರ್ಷವಾರು ವಿವರ ನೀಡುವುದು?

ಆ) ಹಣ ಬಿಡುಗಡೆ ಮಾಡಿದ್ದರೆ ಕಾರಣಗಳೇನು? ಇದರಿಂದ ಗ್ರಾಮಗಳ ಅಭಿವೃದ್ಧಿ ಕುಂಠಿತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಕಡಿಮೆ ಹಣ ಬಿಡುಗಡೆ ಮಾಡಿದ್ದಲ್ಲಿ ಉಳಿದ ಹಣವನ್ನು ಯಾವಾಗ ಬಿಡುಗಡೆ ಮಾಡಲಾಗುವುದು.

ಡಾ. ಹೆಚ್.ಸಿ. ಮಹದೇವಪ್ಪ (ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು)

ಅ)

ವರ್ಷ	ನಿಗದಿಪಡಿಸಿದ ಅನುದಾನ (ರೂ. ಲಕ್ಷಗಳಲ್ಲಿ)	ಬಿಡುಗಡೆ ಮಾಡಿರುವ ಅನುದಾನ (ರೂ. ಲಕ್ಷಗಳಲ್ಲಿ)	ಕೊರತೆ (ರೂ. ಲಕ್ಷಗಳಲ್ಲಿ)
2002-03	19807	13886	5921
2003-04	28295	23653	4642
2004-05	28265	18840	9425

ಆ) ಗ್ರಾಮ ಪಂಚಾಯತಿಗಳಿಗೆ ಬಿಡುಗಡೆ ಮಾಡಬೇಕಿದ್ದ ಹಣವನ್ನು ಈ ಗ್ರಾಮ ಪಂಚಾಯತಿಗಳು ಕೆ.ಪಿ.ಟಿ.ಸಿ.ಎಲ್.ಗೆ ಪಾವತಿಸಬೇಕಿದ್ದ ಬಾಕಿ ವಿದ್ಯುತ್ ಬಿಲ್ಲಿನ ಸಂಬಂಧ

ಸರ್ಕಾರದಿಂದ ನೇರವಾಗಿ ಪಾವತಿಸಲಾಗಿದೆ. ಇದರಿಂದ ಅಭಿವೃದ್ಧಿ ಕುಂಠಿತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

೩) ಗ್ರಾಮ ಪಂಚಾಯತಿಗಳು ಪಾವತಿಸಬೇಕಿದ್ದ ವಿದ್ಯುತ್ ಬಿಲ್ಲನ್ನು ಸರ್ಕಾರವೇ ಪಾವತಿಸಿರುವುದರಿಂದ, ಗ್ರಾಮ ಪಂಚಾಯತಿಗಳಿಗೆ ಉಳಿದ ಹಣವನ್ನು ಪಾವತಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ನಾನು ಕೇಳಿರುವ ಪ್ರಶ್ನೆಗಳಿಗೆ ಮಾನ್ಯ ಸಚಿವರು ಉತ್ತರಿಸಿದ್ದಾರೆ. ಗ್ರಾಮ ಪಂಚಾಯಿತಿಗಳಿಗೆ ಕಳೆದ ಮೂರು ವರ್ಷಗಳಿಂದ ಅನುದಾನ ಬಿಡುಗಡೆ ಮಾಡಿರುವ ಕುರಿತು ವಿವರ ಕೇಳಿದರೆ, 2002–03ನೇ ಸಾಲಿನಲ್ಲಿ 198 ಕೋಟಿ ಬಿಡುಗಡೆಯಾಗಿದ್ದು, ಅದರಲ್ಲಿ 59 ಕೋಟಿಯಷ್ಟು ಕೊರತೆಯಿರುವುದಾಗಿ ತಿಳಿಸಿದ್ದೀರಿ. ನಿಗದಿಪಡಿಸಿದ ಹಣ 198 ಕೋಟಿ ಇದ್ದರೆ 138 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೀರಿ. ಅದೇ ರೀತಿ 2003–04ನೇ ಸಾಲಿನಲ್ಲಿ 282 ಕೋಟಿ ರೂಪಾಯಿಗಳಿಗೆ 236 ಕೋಟಿ ಬಿಡುಗಡೆ ಮಾಡಲಾಗಿದೆ. ಅಂದರೆ, ಬಾಕಿ 46 ಕೋಟಿ ಇಲ್ಲ, 2004–05 ರಲ್ಲಿ 282 ಕೋಟಿ ರೂಪಾಯಿಗಳಿಗೆ 188 ಕೋಟಿ ಬಿಡುಗಡೆಯಾಗಿದ್ದು, ಬಾಕಿ 94 ಕೋಟಿ ಬಿಡುಗಡೆಯಾಗಿಲ್ಲ. ಕೊರತೆಯಿರುವ ಹಣವನ್ನು ಕೆಪಿಟಿಸಿಎಲ್ ಬಿಲ್‌ಗೆ ಹೊಂದಾಣಿಕೆ ಮಾಡಿಕೊಳ್ಳಲಾಗಿದೆಯೆಂದು ತಾವು ಉತ್ತರಿಸಿದ್ದೀರಿ. ಇದು ಕೊರತೆ ಹಣವೆಂದು ಅನಿಸುವುದಿಲ್ಲ. ತಾವು ಕೆಪಿಟಿಸಿಎಲ್‌ಗೆ ಪೂರ್ತಿ ಹಣವನ್ನು ಪಾವತಿಸಿದ್ದೀರಾ? ಅಥವಾ ಬಿಡುಗಡೆಯಾದ ಹಣ ಉಳಿದುಕೊಂಡಿದೆಯೇ? ಏಕೆಂದರೆ 282 ಕೋಟಿ ರೂಪಾಯಿಗಳಲ್ಲಿ ಈ ವರ್ಷಕ್ಕೆ ಸಂಬಂಧಿಸಿದಂತೆ 94 ಕೋಟಿ ಹಣವನ್ನು ನೀವು ಕೆಪಿಟಿಸಿಎಲ್‌ಗೆ ಪಾವತಿಸಿರುವುದಾಗಿ ಹೇಳುತ್ತಿರುವುದು ನಿಜವೇ? ಹೇಗೆ? ಅಥವಾ ಬೇರೆ ಉದ್ದೇಶಕ್ಕಾಗಿ ಬಿಡುಗಡೆ ಮಾಡಿದ ಹಣ ಉಳಿದಿದೆಯೇ? ಹೇಗೆ? ಸ್ಪಷ್ಟಪಡಿಸಬೇಕು.

ಡಾ: ಹೆಚ್.ಸಿ. ಮಹದೇವಪ್ಪ : ಮಾನ್ಯ ಅಧ್ಯಕ್ಷರೆ, ಗ್ರಾಮ ಪಂಚಾಯಿತಿಗಳಿಂದ ಕೆಪಿಟಿಸಿಎಲ್‌ಗೆ ಸುಮಾರು 459.30 ಕೋಟಿ ರೂಪಾಯಿಗಳಷ್ಟು ಬಾಕಿ ಹಣದ ಬಿಲ್ ಪಾವತಿಸಬೇಕಾಗಿತ್ತು. ಈ ಸಂಬಂಧ ದಿನಾಂಕ: 2.6.2004 ರಂದು ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಒಂದು ಸಲ ಸಭೆ ಸೇರುವ ಮೂಲಕ ಬೀದಿಲ್ಲದೀಪಗಳನ್ನು ಅಳವಡಿಸಲು ಪಂಚಾಯಿತಿಗಳಿಗೆ ಸಾಧ್ಯವಾಗದ್ದರಿಂದ ಮತ್ತು ಜನರು ಕತ್ತಲಿನಲ್ಲಿ ಓಡಾಡಲು ಸಾಧ್ಯವಿಲ್ಲವಾದ್ದರಿಂದ ಮತ್ತು ಕೆಪಿಟಿಸಿಎಲ್‌ಗೆ ಬಾಕಿ ಹಣ ತುಂಬಲು ಪಂಚಾಯಿತಿಗಳಿಗೆ

ಸಾಮರ್ಥ್ಯವಿಲ್ಲವೆಂಬುದನ್ನು ಮನಗಂಡು One Time Settlement ಮುಖಾಂತರ ಬಾಕಿ ಹಣವನ್ನು ಕೆಪಿಟಿಸಿಎಲ್‌ಗೆ ಪಾವತಿಸಿ, ಮುಂದೆ ಪಂಚಾಯಿತಿಗಳೇ ಸಂಪನ್ಮೂಲ ಕ್ರೋಢೀಕರಿಸಿಕೊಂಡು ಕೆಪಿಟಿಸಿಎಲ್‌ಗೆ ಅವರೇ ಬಿಲ್ ಪಾವತಿಸಿಕೊಂಡು ಹೋಗಬೇಕೆಂದು ತೀರ್ಮಾನಿಸಿ One Time Settlement ಮಾಡಿ ಸುಮಾರು 200 ಕೋಟಿ ರೂಪಾಯಿಗಳನ್ನು ಪಾವತಿಸಿದ್ದೇವೆ. ಬಾಕಿ ಉಳಿದಿರುವ 259 ಕೋಟಿ ರೂಪಾಯಿಗಳನ್ನು ನಾಲ್ಕು ಹಂತಗಳಲ್ಲಿ ಪಂಚಾಯಿತಿಗಳಿಗೆ ಬಿಡುಗಡೆ ಮಾಡಲಾಗುವುದು. ಕೆಪಿಟಿಸಿಎಲ್‌ಗೆ ಬಾಕಿ ಹಣವನ್ನು ಪಂಚಾಯಿತಿಗಳು ಪಾವತಿಸಿದೇ ಇದ್ದುದರಿಂದ ಜನರಿಗೆ ಅನಾನುಕೂಲವಾಗಿತ್ತು. ಆದಕಾರಣ, ಉನ್ನತ ಮಟ್ಟದಲ್ಲಿ ಸರ್ಕಾರ ಈ ಕುರಿತಂತೆ ಒಂದು ತೀರ್ಮಾನ ಕೈಗೊಂಡು One Time Settlement ಮಾಡುವ ಮೂಲಕ ಬೀದಿ ದೀಪಗಳನ್ನು ಅಳವಡಿಸಿ ಪಂಚಾಯಿತಿಗಳ ಬಾಕಿ ಹಣ ಪಾವತಿಸಲು ಕ್ರಮ ಕೈಗೊಳ್ಳಲಾಗಿದೆ. ಇನ್ನು ಮುಂದೆ ಪಂಚಾಯಿತಿಗಳೇ ಬಿಲ್ ಪಾವತಿಸಬೇಕಿರುತ್ತದೆ. ಪಂಚಾಯಿತಿಗಳು ಕೆಪಿಟಿಸಿಎಲ್‌ಗೆ ಪಾವತಿಸಬೇಕಿದ್ದ ಬಾಕಿ ಹಣ 259 ಕೋಟಿ ರೂಪಾಯಿಗಳನ್ನು ಸರ್ಕಾರವೇ ಪಾವತಿಸಿರುವುದರಿಂದ ಪಂಚಾಯಿತಿಗಳಿಗೆ ಹಣ ಬಿಡುಗಡೆ ಮಾಡುವ ಪ್ರಶ್ನೆ ಉದ್ಭವವಾಗುವುದಿಲ್ಲ. ಗ್ರಾಮ ಪಂಚಾಯಿತಿಗಳು ಇನ್ನು ಮುಂದೆ ಆ ರೀತಿ ಭಾವಿಸಬೇಕೆಂದು ಈ ಮೂಲಕ ಸೂಚನೆ ನೀಡಲಾಗಿದೆ.

ಶ್ರೀ ಜಗದೀಶ್ ಶೆಟ್ಟರ್ : ಪ್ರತಿ ಗ್ರಾಮ ಪಂಚಾಯಿತಿಗು ಐದು ಲಕ್ಷ ರೂಪಾಯಿಗಳನ್ನು ಮಂಜೂರು ಮಾಡುವುದಾಗಿ ಹಿಂದಿನ ಸರ್ಕಾರ ಘೋಷಿಸಿತ್ತು. ಬಹುಶಃ ತಾವು ಅದನ್ನು ಮುಂದುವರೆಸಿದ್ದೀರೆಂದು ಭಾವಿಸುತ್ತೇನೆ. ಕಾಂಗ್ರೆಸ್ ಪಕ್ಷದ ರಾಷ್ಟ್ರೀಯ ಅಧ್ಯಕ್ಷರಾದ ಶ್ರೀಮತಿ ಸೋನಿಯಾ ಅವರು ರಾಜ್ಯಕ್ಕೆ ಬಂದಿದ್ದಾಗ ಧಾರವಾಡದ ಬೇಲೂರಿನಲ್ಲಿ ಬೇಲೂರು ಘೋಷಣೆ ಮಾಡಿಸಿದಿರಿ, ಸದರಿ ಘೋಷಣೆಯಂತೆ ಕೆಲವು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುತ್ತಿದ್ದೀರಾ? ಹೇಗೆ? ಪ್ರತಿ ಪಂಚಾಯಿತಿಗೆ ನೇರವಾಗಿ ಬಿಡುಗಡೆಯಾಗಬೇಕಿದ್ದ ಐದು ಲಕ್ಷ ರೂಪಾಯಿ ಹಣ ಇವೊತ್ತಿನವರೆಗೂ ಒಂದೇ ಕಂತಿನಲ್ಲಿ ಬಿಡುಗಡೆಯಾಗುತ್ತಿಲ್ಲ, ಬದಲಾಗಿ ನಾಲ್ಕೈದು ಕಂತುಗಳಲ್ಲಿ ಹಣ ಬಿಡುಗಡೆಯಾಗುತ್ತಿದೆ. ಇದರಿಂದಾಗಿ ಗ್ರಾಮ ಪಂಚಾಯಿತಿಯಲ್ಲಿ ಅಭಿವೃದ್ಧಿ ಕೆಲಸ-ಕಾರ್ಯಗಳನ್ನು ಕೈಗೊಳ್ಳುವಲ್ಲಿ ಬಹಳಷ್ಟು ಅಡೆತಡೆಗಳುಂಟಾಗುತ್ತಿದೆ. ಐದು ಲಕ್ಷ ರೂಪಾಯಿಗಳನ್ನು ಪಂಚಾಯಿತಿಗೆ ನೇರವಾಗಿ ಬಿಡುಗಡೆ ಮಾಡುತ್ತೀರಾ? ಹೇಗೆ? ಉತ್ತರಿಸಬೇಕು.

ಇನ್ನು ಹನ್ನೊಂದನೇ ಹಣಕಾಸು ಆಯೋಗದ ರೀತ್ಯ ಗ್ರಾಮ ಪಂಚಾಯಿತಿಗಳಿಗೆ ಹಣ ಸಕಾಲದಲ್ಲಿ ಸರಿಯಾಗಿ ಮುಟ್ಟುತ್ತಿಲ್ಲ, ಅಭಿವೃದ್ಧಿ ನಿಧಿಯೂ ಸಕಾಲದಲ್ಲಿ ತಲುಪುತ್ತಿಲ್ಲ, ಬಿಡುಗಡೆ ಮಾಡುವ ಹಣದಲ್ಲಿ ಬಾಕಿ ಉಳಿಸಿಕೊಳ್ಳುತ್ತಿದ್ದು, ಕಂತುಗಳ ಮೂಲಕ ಬಿಡುಗಡೆ ಮಾಡಲಾಗುತ್ತಿದೆ. ಇದರಿಂದಾಗಿ ಗ್ರಾಮೀಣ ಭಾಗಗಳಲ್ಲಿ ಸಕಾಲದಲ್ಲಿ ಅಭಿವೃದ್ಧಿ ಕಾಮಗಾರಿಗಳು ಜರುಗುತ್ತಿಲ್ಲ, "ಅಧಿಕಾರ ವಿಕೇಂದ್ರೀಕರಣಗೊಳಿಸುವ ಮೂಲಕ ಪಂಚಾಯಿತಿಗಳಿಗೆ ನೇರವಾಗಿ ಅಧಿಕಾರ ಕೊಟ್ಟಿದ್ದೇವೆ, ಹೆಚ್ಚು ಹಣ ಕೊಡುತ್ತೇವೆ" ಎಂದೆಲ್ಲಾ ಏನು ಹೇಳಲಾಗುತ್ತಿದೆ, ಗ್ರಾಮೀಣ ಭಾಗಗಳಿಗೆ ಹೋಗಿ ನೋಡಿದರೆ, ಕೈಗೊಳ್ಳಬೇಕಿರುವ ಬಹಳಷ್ಟು ಯೋಜನೆಗಳಿದ್ದು, ಬಹಳಷ್ಟು ಪ್ರಮಾಣದಲ್ಲಿ ಹಣ ನೇರವಾಗಿ ಗ್ರಾಮ ಪಂಚಾಯಿತಿಗಳಿಗೆ ಬರುತ್ತಿಲ್ಲ, ಸಕಾಲದಲ್ಲಿ ಬಿಡುಗಡೆಯಾಗುತ್ತಿಲ್ಲ, ಈ 2-3 ವಿಷಯಗಳಿಗೆ ಸಂಬಂಧಿಸಿದಂತೆ ಮಾನ್ಯ ಸಚಿವರು ಸ್ಪಷ್ಟೀಕರಣ ನೀಡಬೇಕೆಂದು ತಮ್ಮ ಮೂಲಕ ಅವರಲ್ಲಿ ಕೇಳುತ್ತೇನೆ.

ಡಾ॥ ಹೆಚ್.ಸಿ. ಮಹದೇವಪ್ಪ : ಗ್ರಾಮ ಪಂಚಾಯಿತಿಗಳಿಗೆ ಬಿಡುಗಡೆ ಮಾಡಬೇಕಾಗಿರುವ ಐದು ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಲು ಕ್ರಮ ಕೈಗೊಂಡಿದ್ದೇವೆ. 2002-03 ಮತ್ತು 2003-04ನೇ ಸಾಲುಗಳಲ್ಲಿ ಪಂಚಾಯಿತಿಗಳಿಗೆ ಹಣ ಬಿಡುಗಡೆ ಮಾಡಿದ್ದೇವೆ. ಹನ್ನೊಂದನೇ ಹಣಕಾಸು ಆಯೋಗದ ಪ್ರಕಾರ ಕೇಂದ್ರ ಸರ್ಕಾರದಿಂದ 78 ಕೋಟಿ ರೂಪಾಯಿಗಳು ರಾಜ್ಯಕ್ಕೆ ಬರಬೇಕಾಗಿದೆ. ನಮ್ಮ ರಾಜ್ಯದ ಪಾಲಿನ ಹಣವನ್ನು ಕೇಂದ್ರ ಸರ್ಕಾರ ಕೊಡಲೇಬೇಕಾಗಿದೆ. ಇತ್ತೀಚೆಗೆ ನವದೆಹಲಿಯಲ್ಲಿ ರಾಜ್ಯದ ಲೋಕಸಭಾ ಸದಸ್ಯರುಗಳ ಸಭೆ ಏರ್ಪಡಿಸಿದ ಸಂದರ್ಭದಲ್ಲಿ ಈ ವಿಷಯವನ್ನು ಪ್ರಸ್ತಾಪಿಸಲಾಗಿದೆ. ಅಲ್ಲದೆ, ಖುದ್ದಾಗಿ ಕೇಂದ್ರದ ಹಣಕಾಸು ಮಂತ್ರಾಲಯಕ್ಕೆ ಪತ್ರ ಬರೆಯುವ ಮೂಲಕ ನಮ್ಮ ರಾಜ್ಯಕ್ಕೆ ಬರಬೇಕಾಗಿರುವ ಹಣವನ್ನು ಬಿಡುಗಡೆ ಮಾಡಿಕೊಡಬೇಕೆಂದೂ ಸಹ ಹೇಳಿದ್ದೇವೆ. ಕೇಂದ್ರದಿಂದ ಹಣ ಬಂದ ತಕ್ಷಣ ಪಂಚಾಯಿತಿಗಳಿಗೆ ಹಣ ಬಿಡುಗಡೆ ಮಾಡುವ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಗ್ರಾಮೀಣಾಭಿವೃದ್ಧಿ ಬಗ್ಗೆ ಕಳಕಳಿ ಇಟ್ಟುಕೊಂಡಿರುವ ತಾವು ಹಣಕಾಸು ಸಚಿವರಾಗಿರುವ ಸಿದ್ಧರಾಮಯ್ಯನವರೊಂದಿಗೆ ಕೆಲಸ ಮಾಡುತ್ತಿದ್ದೀರಿ. ತಾವು ನೇರವಾಗಿ ಹೇಳಬೇಕು, 2003-04ನೇ ಸಾಲಿನಲ್ಲಿ ಗ್ರಾಮ ಪಂಚಾಯಿತಿಗೆ ಐದು ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡುವ ಬದಲು ಕೇವಲ 80

ಸಾವಿರ ರೂಪಾಯಿಗಳನ್ನು ಒದಗಿಸಿದ್ದೀರಿ. ಆದೇ ರೀತಿ 2004–05ನೇ ಸಾಲಿಗೆ 83 ಸಾವಿರ ರೂಪಾಯಿಗಳನ್ನು ಕೊಟ್ಟಿದ್ದೀರಿ. ಉಳಿದ ಒಂದು ಲಕ್ಷ ಚಿಲ್ಲರೆ ರೂಪಾಯಿಗಳಷ್ಟು ಹಣವನ್ನು ಕೆಪಿಟಿಸಿಎಲ್‌ಗೆ ಹೊಂದಾಣಿಕೆ ಮಾಡಿಕೊಂಡಿದ್ದೀರಿ, ಅಂದರೆ, ಕಳೆದ ಸಲ ಕೆಪಿಟಿಸಿಎಲ್‌ಗೆ ಹೊಂದಾಣಿಕೆ ಮಾಡಿಕೊಂಡಿದ್ದರಿಂದ ಈ ಸಲ ಎರಡೂವರೆ ಲಕ್ಷ ರೂಪಾಯಿಗಳನ್ನು ಕೊಡಲಿಲ್ಲ ಮತ್ತು ಈ ವರ್ಷ ಎರಡೂವರೆ ಲಕ್ಷ ರೂಪಾಯಿಗಳನ್ನೂ ಕೊಡಲಿಲ್ಲ, ಬೇಕಿದ್ದರೆ, ನೀವು ಅಂಕಿ–ಅಂಶಗಳನ್ನು ತರಿಸಿಕೊಳ್ಳಿ. ಅಂದರೆ, ನಿಮ್ಮ ಬೇಲೂರು ಘೋಷಣೆ ಅದೊಂದು ಘೋಷಣೆಯಾಗಿ ಉಳಿದಿದೆಯೇ ಹೊರತು, ಈ ಬಗ್ಗೆ ನಿಮ್ಮ ಪಕ್ಷದ ರಾಷ್ಟ್ರೀಯ ಅಧ್ಯಕ್ಷರಾದ ಸೋನಿಯಾಗಾಂಧಿಯವರಿಗೆ ನಾನು ಪ್ರತಿಪಕ್ಷದ ನಾಯಕನಾಗಿ ಪತ್ರ ಬರೆಯುತ್ತೇನೆ. ಏಕೆಂದರೆ, ನೀವು ಯಾವ ರೀತಿ ವಂಚನೆ ಮಾಡುತ್ತಿದ್ದೀರೆಂದರೆ, ನೀವು ಹೇಳಿದ್ದಕ್ಕೂ ನಡೆದುಕೊಳ್ಳುವುದಕ್ಕೂ ವ್ಯತ್ಯಾಸವೇನೂ ಇಲ್ಲದಂತಾಗಿದೆ. ಕೇವಲ ಪ್ರಚಾರಕ್ಕೋಸ್ಕರ ಈ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದೀರಿ. ಕಳೆದ ವರ್ಷ ಪೂರ್ತಿಯಾಗಿ ಐದು ಲಕ್ಷ ರೂಪಾಯಿಗಳನ್ನು ಪಂಚಾಯಿತಿಗೆ ಒದಗಿಸಿಕೊಟ್ಟಿದ್ದೀರಾ? ಈ ವರ್ಷ ಮಾರ್ಚ್ ತಿಂಗಳಾಂತ್ಯಕ್ಕೆ ಬಂದಿದ್ದರೂ ಹಣ ಕೊಟ್ಟಿದ್ದೀರಾ? ದಯವಿಟ್ಟು ಈ ಕುರಿತಾದ ಅಂಕಿ–ಅಂಶಗಳನ್ನು ಕೊಡಿ. ನನಗೆ ಇನ್ನೇನೂ ವಿವರ ಬೇಡ.

ಡಾ: ಹೆಚ್.ಸಿ.ಮಹದೇವಪ್ಪ : ಗ್ರಾಮ ಪಂಚಾಯಿತಿಗಳಿಗೆ ಐದು ಲಕ್ಷ ರೂಪಾಯಿಗಳನ್ನು ನಾವು ಹಂತ ಹಂತವಾಗಿ ಬಿಡುಗಡೆ ಮಾಡುತ್ತೇವೆ.

ಶ್ರೀ ಬಿ.ಎಸ್.ಯಡಿಯೂರಪ್ಪ : ಯಾವ ಹಂತ? ಈ ವರ್ಷ ಮುಗಿದ ನಂತರ ಹಣ ಬಿಡುಗಡೆ ಮಾಡುತ್ತೀರಾ? ಹೋದ ವರ್ಷವೂ ಕೊಟ್ಟಿಲ್ಲ, ಈ ವರ್ಷದ ಹಣವನ್ನೂ ಕೊಟ್ಟಿಲ್ಲ, ಹಣ ಕೊಡಬೇಕಾದ್ದು ಆಯವ್ಯಯ ವರ್ಷದಲ್ಲಿ ತಾನೇ? ಹಣಕಾಸು ವರ್ಷ ಮುಗಿಯುವುದರೊಳಗೆ ತಾವು ಹಣ ಬಿಡುಗಡೆ ಮಾಡಬೇಕು.

ಡಾ: ಹೆಚ್.ಸಿ.ಮಹದೇವಪ್ಪ : ಗ್ರಾಮ ಪಂಚಾಯಿತಿಗಳಿಗೆ ಕೊಡಬೇಕಾಗಿರುವ ಐದು ಲಕ್ಷ ರೂಪಾಯಿ ಹಣವನ್ನು ನಿಲ್ಲಿಸಲು ಸಾಧ್ಯವಿಲ್ಲ. ಅದನ್ನು ಕೊಡುತ್ತೇವೆ. ಈ ಬಗ್ಗೆ ಯಾವುದೇ ಅನುಮಾನ ಬೇಡ.

ಶ್ರೀ ಬಿ.ಎಸ್.ಯಡಿಯೂರಪ್ಪ : ಕಳೆದ ಎರಡು ವರ್ಷದ ಕರ್ಮ ಕಥೆ ಹೇಳಿ. ಈಗ ಏನು ಮಾಡಿದ್ದೀರಿ? ನನಗೆ ಈ ಉತ್ತರ ಬೇಡ. ಕಳೆದ ವರ್ಷ ಎಷ್ಟು ಹಣ

ಕೊಟ್ಟಿದ್ದೀರಿ ಎಂಬ ಅಂಕಿ-ಅಂಶಗಳನ್ನು ತಿಳಿಸಿ, ಏಕೆಂದರೆ, ಇದು ರಾಜ್ಯದ ಜನತೆಗೆ ಗೊತ್ತಾಗಬೇಕಾಗುತ್ತದೆ. 2003-04ನೇ ಸಾಲಿನಲ್ಲಿ ಬಿಡುಗಡೆ ಮಾಡಬೇಕಾಗಿದ್ದ ಐದು ಲಕ್ಷ ರೂಪಾಯಿಗಳಲ್ಲಿ ಎಷ್ಟು ಹಣ ಕೊಟ್ಟಿದ್ದೀರಿ? ಅದೇ ರೀತಿ 2004-05ನೇ ಸಾಲಿಗೆ, ಈ ಕ್ಷಣದವರೆಗೆ ಎಷ್ಟು ಹಣ ಕೊಟ್ಟಿದ್ದೀರಿ? ಹೋದ ಸಲ 80 ಸಾವಿರ ಕೊಟ್ಟಿದ್ದರೆ, ಈ ಸಲ 83 ಸಾವಿರ ರೂಪಾಯಿಗಳನ್ನು ಮಾತ್ರ ಕೊಟ್ಟಿದ್ದೀರಿ.

ಶ್ರೀ ಕೆ.ಎಸ್.ಈಶ್ವರಪ್ಪ : "ಹಂತ ಹಂತವಾಗಿ ಹಣ ಬಿಡುಗಡೆ ಮಾಡುತ್ತೇನೆ:" ಎಂದರೆ, ನಾನು ಮಾನ್ಯ ಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ಹಂತ ಹಂತವಾಗಿ ಎಂದರೆ ಅದೇ ವರ್ಷದಲ್ಲಿ ಎಂದರ್ಥ. ಒಂದು ಹಂತ ಈ ವರ್ಷದಲ್ಲಿ ಮತ್ತೊಂದು ಹಂತ ಹತ್ತು ವರ್ಷ ಕಳೆದ ನಂತರವಲ್ಲ ಹೌದೇ? ದಯವಿಟ್ಟು ತಾವು ಇದಕ್ಕೆ ಉತ್ತರಿಸಬೇಕು. ಯಾವ್ಯಾವ ವರ್ಷಗಳಲ್ಲಿ ಹಣ ಬಿಡುಗಡೆಯಾಗಬೇಕಿತ್ತೋ, ಆಯಾ ವರ್ಷಗಳಲ್ಲೇ ಹಂತ ಹಂತವಾಗಿ ಕೊಡಬೇಕಾಗಿದ್ದ ಐದು ಲಕ್ಷ ರೂಪಾಯಿಗಳನ್ನು ಏನು ಮಾಡುತ್ತೀರಿ? 80 ಸಾವಿರ ರೂಪಾಯಿಗಳನ್ನು ಕೊಟ್ಟು ಕೆಪಿಟಿಸಿಎಲ್‌ಗೂ ಪಾವತಿ ಮಾಡಿದಿರಿ, ಉಳಿದ ಎರಡೂವರೆ ಲಕ್ಷ ರೂಪಾಯಿಗಳನ್ನು ಕೊಡಬೇಕಲ್ಲವೇ? ಆ ವರ್ಷದಲ್ಲಿ ಕೊಟ್ಟಿದ್ದೀರಾ? ಇದಕ್ಕೆ ಉತ್ತರ ಕೊಡಿ ಅಷ್ಟೇ.

ಡಾ: ಹೆಚ್.ಸಿ.ಮಹದೇವಪ್ಪ : ಗ್ರಾಮ ಪಂಚಾಯಿತಿಗಳಿಗೆ ಕೊಡಬೇಕಾಗಿರುವ ಐದು ಲಕ್ಷ ರೂಪಾಯಿಗಳನ್ನು ಒಟ್ಟು ನಾಲ್ಕು ಕಂತುಗಳಲ್ಲಿ ನಿಗದಿಪಡಿಸಿ ಆಯಾ ವರ್ಷದಲ್ಲೇ ಬಿಡುಗಡೆ ಮಾಡುತ್ತೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಕೊಟ್ಟಿದ್ದೀರಾ?

ಡಾ:ಹೆಚ್.ಸಿ. ಮಹದೇವಪ್ಪ : ಖಂಡಿತವಾಗಿಯೂ ಕೊಡುತ್ತೇವೆ.

ಅಧ್ಯಕ್ಷರು : ಮಾನ್ಯ ಸಚಿವರೆ, ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಇತರ ಸದಸ್ಯರು ತಮ್ಮನ್ನು ಕೇಳುತ್ತಿರುವುದೇನೆಂದರೆ, ಗ್ರಾಮ ಪಂಚಾಯಿತಿಗಳಿಗೆ ನೀಡಬೇಕಾಗಿರುವ ಐದುಲಕ್ಷ ರೂಪಾಯಿಗಳನ್ನು ನಾಲ್ಕು ಕಂತುಗಳಲ್ಲಿ ಕೊಡುವುದಾಗಿ ತಾವು ಹೇಳಿದ್ದೀರಿ, ಜೊತೆಗೆ ತಾವು ವಿದ್ಯುತ್ ಬಾಬ್ತಿನ ಬಿಲ್ಲಿಗೆ ಹೊಂದಾಣಿಕೆ ಮಾಡಿಕೊಂಡು ಪಾವತಿಸಿರುವುದೂ ಸೇರಿದಂತೆ ಎರಡೂವರೆ ಲಕ್ಷ ರೂಪಾಯಿಗಳಿಗೂ ಮೇಲ್ಪಟ್ಟು ಹಣ

ಕೊಟ್ಟಿಲ್ಲವೆಂದು ನೀವು ತಪ್ಪು ಮಾಹಿತಿ ಕೊಡುತ್ತಿದ್ದೀರೆಂದು ಅವರು ಹೇಳುತ್ತಿದ್ದಾರೆ. ಐದು ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೀರಾ? ತಾವು ಸರಿಯಾಗಿ ಹೇಳಬೇಕು.

ಡಾ: ಹೆಚ್.ಸಿ.ಮಹದೇವಪ್ಪ : ತಪ್ಪು ಮಾಹಿತಿ ಕೊಡುತ್ತಿಲ್ಲ.

ಅಧ್ಯಕ್ಷರು : ಎರಡೂವರೆ ಲಕ್ಷ ರೂಪಾಯಿಗಳಿಗೂ ಮೇಲ್ಪಟ್ಟು ಹಣವನ್ನು ಕೊಟ್ಟಿಲ್ಲವೆಂದು ಅವರು ಸ್ಪಷ್ಟವಾಗಿ ಹೇಳುತ್ತಿದ್ದಾರೆ. ವಿದ್ಯುಚ್ಛಕ್ತಿ ಬಾಬ್ತು ಸಂಬಂಧ ಕೆಪಿಟಿಸಿಎಲ್‌ಗೆ ಕಟ್ಟಬೇಕಾದ ಬಿಲ್‌ನ ಹಣವನ್ನು ಹೊಂದಾಣಿಕೆ ಮಾಡಿಕೊಂಡು ಪಾವತಿಸಿರುವುದೂ ಸೇರಿದಂತೆ ಎರಡೂವರೆ ಲಕ್ಷ ಮೇಲ್ಪಟ್ಟು ಹಣ ಕೊಟ್ಟಿಲ್ಲವೆಂದು ಹೇಳುತ್ತಿದ್ದಾರೆ. ಅವರು ಹೇಳುತ್ತಿರುವುದು ಸರಿಯೇ ?

ಡಾ: ಹೆಚ್.ಸಿ. ಮಹದೇವಪ್ಪ : ಕೆಪಿಟಿಸಿಎಲ್‌ಗೆ ಕೊಡಬೇಕಿದ್ದ ಹಣವನ್ನು ಒಂದೇ ಬಾರಿಗೆ ಕೊಟ್ಟಿದ್ದೇವೆ. ಪಂಚಾಯಿತಿಗಳು ತಮ್ಮ ಸಂಪನ್ಮೂಲಗಳನ್ನು ಕ್ರೋಢೀಕರಿಸಿಕೊಂಡು ಕೆಪಿಟಿಸಿಎಲ್‌ಗೆ ಹಣ ಪಾವತಿಸಬೇಕಾಗಿತ್ತು. ಅವರು ಸಂಪನ್ಮೂಲಗಳನ್ನು ಕ್ರೋಢಿಕರಿಸಿಕೊಂಡು ಮಾಡಬೇಕು.

ಅಧ್ಯಕ್ಷರು : ಅವರು ಹೇಳಲಿ, ಮಧ್ಯದಲ್ಲಿ ನೀವು ಸುಮ್ಮನೇ ಇದು ಮಾಡಬೇಡಿ.....

ಶ್ರೀ ಬಿ.ಎಸ್.ಯಡಿಯೂರಪ್ಪ : ಕೆ ಪಿ ಟಿ ಸಿ ಎಲ್ ಸೇರಿ. . . .

ಅಧ್ಯಕ್ಷರು : ಈಗ ಏನಪ್ಪ ಅಂದರೆ ಮಾನ್ಯ ವಿರೋಧಪಕ್ಷದ ಬಹಳಷ್ಟು ಜನ ಸದಸ್ಯರಿಗೆ ಉತ್ತರ ಬೇಕಿಲ್ಲ, ಕರೆಕ್ಟ್ ಆದುದು ಎನ್ನುವುದು ನನ್ನ ಭಾವನೆ. ಏಕೆಂದರೆ ನೀವು ಪದೇ ಪದೇ ಎದ್ದೇಳುವುದನ್ನು ನೋಡಿದರೆ ನಿಮಗೆ ಉತ್ತರ ಬೇಕಿಲ್ಲ ಅಷ್ಟೇ. ಕರೆಕ್ಟ್ ಆಗಿ ಹೇಳಿದಿರಿ.

ಶ್ರೀ ಹೆಚ್.ಸಿ.ಮಹದೇವಪ್ಪ : ಮಾನ್ಯ ಅಧ್ಯಕ್ಷರೇ ಹಂತ ಹಂತವಾಗಿ ಗ್ರಾಮ ಪಂಚಾಯಿತಿಗಳಿಗೆ ಎಷ್ಟು ಹಣ ಕೊಡಬೇಕು ಎನ್ನುವುದನ್ನು ವಿವರವಾದ ವರದಿಯನ್ನು ತರಿಸಿ ಹೇಳುತ್ತೇನೆ.

(ಮುಂದಿನ)

ಶ್ರೀ ಬಿ.ಎಸ್.ಯಡಿಯೂರಪ್ಪ : ಇಲ್ಲಾ ಸಾರ್, ಇಲ್ಲಾ ಸಾರ್. . . .

ಅಧ್ಯಕ್ಷರು : ಮಾನ್ಯ ಯಡಿಯೂರಪ್ಪನವರೇ, ಅವರು ಹೇಳಿದ್ದಾರೆ 5 ಲಕ್ಷ ಅಂತ. ಕೊನೆಗೆ ನೀವೆಲ್ಲ ಎರಡೂವರೆ ಲಕ್ಷದ ಮೇಲೆ ಹೋಗಿಯೇ ಇಲ್ಲ ಅಂತ ಹೇಳಿದ ಮೇಲೆ ವಿವರಗಳು ಅವರಿಗೆ ಸದ್ಯದಲ್ಲಿ ಪಡೆಯಲು ಸಾಧ್ಯವಾಗುವುದಿಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ : ಸಾರ್ ಒಂದು ನಿಮಿಷ. ಒಬ್ಬ ಗ್ರಾಮೀಣ ಇಲಾಖೆಯ ಸಚಿವರಾಗಿ ಈ ವರ್ಷದ ಬಜೆಟ್ ಮಾರ್ಚ್‌ಗೆ ಮುಗಿಯುತ್ತಿದೆ. ಇದುವರೆಗೂ ಎಷ್ಟು ಕೊಟ್ಟಿದ್ದೀರಿ ಈ 5 ಲಕ್ಷದಲ್ಲಿ ಹೋದ ವರ್ಷ ಎಷ್ಟು ಕೊಟ್ಟಿದ್ದೀರಿ ಅಂದರೆ ಯಾರಿಂದ ಲೆಕ್ಕ ಕೇಳುತ್ತಾರೆ ಇವರು? ನೇರವಾಗಿ ನೀವು ಕ್ಷಮಾಪಣೆ ಕೇಳಿ, ನೀವು ಹಣ ಕೊಟ್ಟಿಲ್ಲ, ಹೋದ ವರ್ಷವೂ ಎರಡೂವರೆ ಲಕ್ಷ ರೂಪಾಯಿ ಮೇಲೆ ಕೊಟ್ಟಿಲ್ಲ, ಈ ವರ್ಷವೂ ಕೊಟ್ಟಿಲ್ಲ, ನೋಡಿ ಸಾರ್ ನಾನು ವೆಲ್‌ಗೆ ಬರಬೇಕಾಗುತ್ತದೆ, ನಾವು ಕೋ ಆಪರೇಷನ್ ಕೊಡುವುದನ್ನು ನೀವು ದುರುಪಯೋಗ ಮಾಡಿಕೊಂಡರೆ ನಾನು ವಿರೋಧಪಕ್ಷದ ನಾಯಕನಾಗಿ ವೆಲ್‌ಗೆ ಬರುತ್ತೇನೆ. ಈಗ ಅಧಿಕಾರದ ವಿಕೇಂದ್ರೀಕರಣದ ಬೊಬ್ಬೆ ಹೊಡೆದು ಬೇಲೂರು ಘೋಷಣೆ ಎಂದು ಹೇಳಿ. . . .

ಅಧ್ಯಕ್ಷರು ; ಯಡಿಯೂರಪ್ಪನವರೇ 31ನೇ ತಾರೀಖಿನವರೆಗೂ ಅಧಿವೇಶನ ಇದೆ. ಅವರು ಆ ಖಾತೆಗೆ ಹೊಸಬರಾಗಿ ಬಂದಿದ್ದಾರೆ, ವಿವರ ಕೊಡುತ್ತೇನೆಂದು ಹೇಳುತ್ತಿದ್ದಾರಲ್ಲ, ತಾವು ಸ್ವಲ್ಪ ಸಮಾಧಾನ ಮಾಡಿಕೊಳ್ಳಿ.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ: ನಾವು ಈ ತರಹದ ಉತ್ತರ ಕೇಳಿಕೊಂಡು ಹೋಗುವುದಕ್ಕೆ ಬಂದಿಲ್ಲ. . . .

(ಗೊಂದಲ)

ಅಧ್ಯಕ್ಷರು: ನಾನು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ. . . .

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ: ಸರಿಯಾಗಿ ಅಧಿಕಾರಿಗಳನ್ನು ಕೇಳಿ ಕರೆಕ್ಟ್ ಆಗಿ ನಮಗೆ ಉತ್ತರ ಕೊಡಿ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಯಡಿಯೂರಪ್ಪನವರೇ ಮಾನ್ಯ ಸಚಿವರ ಬಗ್ಗೆ ನಮಗೆ ಗೌರವ ಇದೆ. ತಾವು ಹೇಳುವಾಗ ಸ್ವಲ್ಪ ಸತ್ಯ ಹೇಳಿ. ಇಲ್ಲದಿದ್ದರೆ ಹಕ್ಕುಚ್ಯುತಿಯಾಗುತ್ತದೆ. ಈ ಸದನದಲ್ಲಿ ದಯಮಾಡಿ ಅದಕ್ಕೆ ಅವಕಾಶ ಕೊಡಬೇಡಿ. ಸ್ಪಷ್ಟ ಹೇಳಿ ಕೊಟ್ಟಿದ್ದರೆ ಕೊಟ್ಟಿದ್ದೇವೆಂದು ಹೇಳಿ, ಇಲ್ಲದಿದ್ದರೆ ಯಾರನ್ನು ರಕ್ಷಣೆ ಮಾಡುವುದಕ್ಕೆ ಇಲ್ಲಿ ಹೇಳುತ್ತಿದ್ದಿರಿ.

ಶ್ರೀ ಬಿ.ಎಸ್.ಯಡಿಯೂರಪ್ಪ : ಮಾನ್ಯ ಸಿದ್ದರಾಮಯ್ಯನವರು ಎದ್ದು ಹೋದರು ಇನ್ನು ಇದ್ದರೆ ಸಮಸ್ಯೆಯಾಗುತ್ತದೆ ಅಂತ.

(ಗೊಂದಲ)

ಅಧ್ಯಕ್ಷರು: ಈಗ ಅವರು ಏನು ಹೇಳಿದ್ದಾರೆ. . .

ಶ್ರೀ ಹೆಚ್.ಸಿ.ಮಹದೇವಪ್ಪ : ಮಾನ್ಯ ಅಧ್ಯಕ್ಷರೇ.

ಶ್ರೀ ಬಿ.ಎಸ್.ಯಡಿಯೂರಪ್ಪ : ಯಾರೂ ಅಧಿಕಾರಿಗಳು ಸಹ ಅವರಿಗೆ ಸಹಕಾರ ಕೊಡುತ್ತಿಲ್ಲ ಸಾರ್. ಅಧಿಕಾರಿಗಳನ್ನು ಫ್ರಂಟ್ ಲೈನ್‌ನಲ್ಲಿ ಕೂರಿಸಿಕೊಳ್ಳಿ, ಅವರು ಅಂಕಿ ಅಂಶ ಕೊಡಲು ಆಗದಿದ್ದ ಮೇಲೆ ಅವರನ್ನು ಏಕೆ ಅಲ್ಲಿ ಕೂರಿಸಿದ್ದೀರಿ. ಏಕೆ ಅವರು ಅಸಿಸ್ಟ್ ಮಾಡುತ್ತಿಲ್ಲ.

ಅಧ್ಯಕ್ಷರು : ಅಧಿಕಾರಿಗಳು ಏಕೆ ಕುಳಿತಿದ್ದಾರೆ ಎನ್ನುವುದನ್ನು ನಾನು ಹೇಗೆ ಹೇಳಲಿ.

ಶ್ರೀ ಬಿ.ಎಸ್.ಯಡಿಯೂರಪ್ಪ : ಮಂತ್ರಿಗಳೇ ನಾವು ಒಂದು ನಿಮಿಷ ಕುಳಿತು ಕೊಳ್ಳುತ್ತೇವೆ. ಕೇಳಿಕೊಂಡು ಬನ್ನಿ ನಿಮ್ಮ ಅಧಿಕಾರಿಗಳನ್ನು ಈ ತರಹ ಆದರೆ ಆಗುವುದಿಲ್ಲ,

ಅಧ್ಯಕ್ಷರು : ನೀವು ಇಷ್ಟು ಕೋಪವಾಗಿಬಿಟ್ಟರೆ ಹೇಗೆ?

ಹೆಚ್.ಸಿ.ಮಹದೇವಪ್ಪ : ಮಾನ್ಯ ಅಧ್ಯಕ್ಷರೇ, ಮಾನ್ಯ ಜಗದೀಶಶೆಟ್ಟರು ಪ್ರಶ್ನೆ ಕೇಳಿರುವುದು ರಾಜ್ಯದಲ್ಲಿರುವ ಗ್ರಾಮ ಪಂಚಾಯತಿಗಳಿಗೆ ಕಳೆದ ಮೂರು ವರ್ಷಗಳಿಂದ

2004–05 ಸೇರಿ ನಿಗಧಿಪಡಿಸಿದ ಬಿಡುಗಡೆ ಮಾಡಿದ ಹಣ ಎಷ್ಟು? ವರ್ಷವಾರು ವಿವರ ನೀಡುವುದು. 2002–03 ರಲ್ಲಿ 1,9807 ಲಕ್ಷ ನಿಗಧಿಯಾಗಿತ್ತು. 13,883 ಲಕ್ಷ ಖರ್ಚು ಮಾಡಿದ್ದಾರೆ. 5,90,200 ಕೊರತೆಯಾಗಿದೆ. 2003–04 ಕ್ಕೆ 28,295 ಲಕ್ಷ ನಿಗದಿಯಾಗಿತ್ತು, 23,653 ಬಿಡುಗಡೆ ಮಾಡಿದ್ದಾರೆ. 4632 ಲಕ್ಷ ಕೊರತೆಯಾಗಿದೆ. 2004–05 ಕ್ಕೆ 28,260 ಲಕ್ಷ ನಿಗಧಿಯಾಗಿತ್ತು. 18850 ಲಕ್ಷ ಬಿಡುಗಡೆಯಾಗಿದೆ. 9425 ಇದರಲ್ಲಿ ಕೊರತೆಯಾಗಿದೆ. ಇವೆಲ್ಲವೂ ಗ್ರಾಮ ಪಂಚಾಯತಿಗಳಿಗೆ ಆಯಾಯ ವರ್ಷ ಬಿಡುಗಡೆಯಾಗಿರುವ ಹಣ ಇಲ್ಲಿ ಏನು ಹಣ ಇದೆ ಇದು ಬಿಡುಗಡೆಯಾಗಿರುವ ಹಣ ಇದರಲ್ಲಿ ಹಣ ಬಿಡುಗಡೆ ಮಾಡದೇ ಇರುವುದಕ್ಕೆ ಕಾರಣಗಳು ಏನು? ಈ ತರಹ ಅವರು ಕೇಳಿದ್ದಾರೆ. ಬಿಡುಗಡೆ ಮಾಡದೇ ಹಣ ಉಳಿಸಿಕೊಳ್ಳಲು ಕಾರಣ ಏನು ಎಂದು ಪ್ರಶ್ನೆ ಕೇಳಿದ್ದಾರೆ. ಇವೆಲ್ಲವೂ ಬಿಡುಗಡೆ ಮಾಡಿರುವುದು. ಏಕೆ ಕೊರತೆ ಬಂತು ಎನ್ನುವುದನ್ನು ಕೂಡ ಹೇಳಿದ್ದೇನೆ. ನಾನು ಹಣವೇ ಬಿಡುಗಡೆ ಮಾಡಿಲ್ಲ ಅಂದರೆ ಕ್ಷಮಾಪಣೆ ಕೇಳುವುದೇನು ಈ ಸದನ ಬಿಟ್ಟು ಹೊರಟು ಹೋಗುತ್ತೇನೆ. 2003–04, 2002–03, 2004–05 ಇವೆಲ್ಲ ಪಂಚಾಯತಿಗೆ ಹಣ ನಿಗಧಿಯಾಗಿ ಬಿಡುಗಡೆಯಾಗಿ ಹಣದ ಕೊರತೆಯ ಪಟ್ಟಿ ಇಲ್ಲಿ ಕೊಟ್ಟಿದ್ದೇನೆ. 11ನೇ ಹಣಕಾಸಿನ ಆಯೋಗದಲ್ಲಿ ಕೇಂದ್ರ ಸರ್ಕಾರದಿಂದ 78 ಸಾವಿರ ಕೋಟಿ ರೂಪಾಯಿ ಬರಬೇಕು. ಅದು ಬಂದ ತಕ್ಷಣವೇ ಬಿಡುಗಡೆ ಮಾಡುತ್ತೇವೆ. ಖುದ್ದಾಗಿ ನಾನೇ ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿದ್ದೇನೆ.

ಅಧ್ಯಕ್ಷರು: ಅವರು ಕೊರತೆಯನ್ನು ಏತಕ್ಕೆ ಎನ್ನುವುದನ್ನು ಹೇಳಿದ್ದಾರೆ. ಅದನ್ನೇ ಕೇಳೋಣ ಏಕೆ ಅಂತ.

ಶ್ರೀ ಬಿ.ಎಸ್.ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ ದಯವಿಟ್ಟು ನಮ್ಮ ಪಾಯಿಂಟ್‌ನ್ನು ನೀವು ಅರ್ಥ ಮಾಡಿಕೊಳ್ಳಿ ಸಾರ್. 5 ಲಕ್ಷದಂತೆ ಈ ರಾಜ್ಯದಲ್ಲಿರುವಂತಹ ಗ್ರಾಮ ಪಂಚಾಯಿತಿಗೆ ಎಷ್ಟು ಹಣ ನೀವು ತೆಗೆದು ಇಟ್ಟಿದ್ದೀರಿ, ನಿಮ್ಮ ಪ್ರಕಾರ ನೀವೇ ಹೇಳುವ ಪ್ರಕಾರ 2003–04 ಕ್ಕೆ 28 ಕೋಟಿ 295 ಲಕ್ಷ ಸಾರಿ. 282 ಲಕ್ಷ 95 ಸಾವಿರ. ನೀವು ಬಿಡುಗಡೆ ಮಾಡಿದಂತಾದ್ದು 236 ಕೋಟಿ 53 ಲಕ್ಷ. ಖರ್ಚಾಗಿರುವಂತಾದ್ದು ಕೊರತೆ 4642 ಲಕ್ಷ. ಅಂದರೆ ಅರ್ಥ ನೀವು ಹಣ ಬಿಡುಗಡೆ ಮಾಡಲಿಲ್ಲ. ಆ ವರ್ಷಕ್ಕೆ ಎರಡನೆಯದು ಮಾಡಲಿಲ್ಲ. 2004–05 282 ಕೋಟಿ 65 ಲಕ್ಷ 188 ಕೋಟಿ 40 ಲಕ್ಷ ಹೇಳಿದ್ದೀರಿ. ಹೌದೇನು ಸ್ವಾಮಿ. ನೀವು ಕೊರತೆ ಅಂದರೆ 94 ಅಂತ ಹೇಳಿದ್ದೀರಿ. ನಾನು

ಕೇಳುತ್ತಿರುವುದು ಕೊರತೆ ಅಂದರೆ ಏನು? ನೀವು ಬಿಡುಗಡೆ ಮಾಡಿದ ಮೇಲೆ ಏಕೆ ಖರ್ಚಾಗಲಿಲ್ಲ. ಪೂರ್ಣ 5 ಲಕ್ಷ ರೂಪಾಯಿಗಳನ್ನು ನೀವು ಏಕೆ ಬಿಡುಗಡೆ ಮಾಡಲಿಲ್ಲ. 5 ಲಕ್ಷದಂತೆ ಎಷ್ಟು ಬಿಡುಗಡೆ ಮಾಡಬೇಕಾಗಿತ್ತು ಸ್ವಾಮಿ ನೀವು.

ಶ್ರೀ ಹೆಚ್.ಸಿ.ಮಹದೇವಪ್ಪ : ಸಾರ್ ಕೊರತೆ ಬಂದಿರುವುದು ಒನ್ ಟೈಮ್ ಸೆಟ್ಲ್‌ಮೆಂಟ್‌ಗೆ ಪಂಚಾಯತಿಗಳು ಕೆಪಿಟಿಸಿಎಲ್‌ಗೆ ಕೊಡಬೇಕಾದಂತಹ ಬಾಕಿ ಹಣವನ್ನು ತುಂಬಲಿಕ್ಕೆ ಇಲ್ಲಿ ಕೊರತೆ ಮಾಡಿತೇ ವಿನಹ ನಾವು ಅವರಿಗೆ ಕೊಡದೇ ಏನೂ ಮಾಡಲಿಲ್ಲ. ಅವರೇ ಕೊಡಬೇಕಾಗಿತ್ತು.

ಶ್ರೀ ಬಿ.ಎಸ್.ಯಡಿಯೂರಪ್ಪ : ಜಮಾ ಮಾಡಿಕೊಳ್ಳುವುದಕ್ಕೆ ನಮ್ಮದು ವಿರೋಧ ಇಲ್ಲ; ನೋಡ್ರಿ 80 ಲಕ್ಷ ಕೊಟ್ರೆ, ಅಭಿವೃದ್ಧಿಗೆ ಉಳಿದಂತಾದ್ದು ಕೆಪಿಟಿಸಿಎಲ್‌ಗೆ ಅಡ್ಜಸ್ಟ್ ಮಾಡಿಕೊಂಡಿದ್ದು ಸೇರಿ ಎರಡೂವರೆ ಲಕ್ಷ ಆಯಿತು. ಉಳಿದದ್ದು ಅಭಿವೃದ್ಧಿಗೆ ಎರಡೂವರೆ ಲಕ್ಷ ಹೋದ ವರ್ಷವೂ ಕೊಡಲಿಲ್ಲ ಈ ವರ್ಷವೂ ಕೊಡಲಿಲ್ಲ ಅಂತ ನನ್ನ ಪಾಯಿಂಟ್. ಹೌದೋ ಅಲ್ಲವೋ ಹೇಳಿ.

ಶ್ರೀ ಹೆಚ್.ಸಿ.ಮಹದೇವಪ್ಪ : ಕೊಟ್ಟಿದ್ದೇವೆ ಸಾರ್.

ಶ್ರೀ ಬಿ.ಎಸ್.ಯಡಿಯೂರಪ್ಪ : ಈ ರೀತಿ ಹೇಳಿದರೆ ಅದು ಪ್ರಿವಿಲೇಜ್ ಆಗುತ್ತದೆ ಸಾರ್.

ಶ್ರೀ ಜಗದೀಶ ಶೆಟ್ಟರ್ : ಈಗ 5600 ಗ್ರಾಮ ಪಂಚಾಯತಿಗಳು ಇವೆ. ನೀವು 5 ಲಕ್ಷದಂತೆ ಲೆಕ್ಕಮಾಡಿ, ಈ ಹಣ ಹೊಂದಾಣಿಕೆಯೇ ಇಲ್ಲ. ಇಲ್ಲಿ ಫಿಗರ್ ಕೊಟ್ಟಿದ್ದು ಸರಿ ಇಲ್ಲ 5600 ಗ್ರಾಮ ಪಂಚಾಯತಿಗಳಿಗೆ 5 ಲಕ್ಷ ರೂಪಾಯಿಗಳಂತೆ ಸೇರಿಸಿದರೆ ಎಷ್ಟು ಹಣ ಆಗುತ್ತದೆ, ತಾವು ತಪ್ಪು ಮಾಹಿತಿ ಕೊಡುತ್ತಿದ್ದೀರಿ.

ಶ್ರೀ ಹೆಚ್.ಸಿ.ಮಹದೇವಪ್ಪ ; ನಾನು ತಮಗೆ ಏನು ಹೇಳಿದ್ದೇನೆ, ಡಿಟೇಲ್ ಆಗಿ ವರದಿ ತರಿಸಿ ಹೇಳುತ್ತೇನೆಂದು ಸಹ ಹೇಳಿದ್ದೇನೆ.

ಅಧ್ಯಕ್ಷರು : ಮಾನ್ಯ ಜಗದೀಶ ಶೆಟ್ಟರವರೇ ಇದು ಬಹಳ ಗಂಭೀರವಾದ ಪ್ರಶ್ನೆ. ವಿರೋಧಪಕ್ಷದ ನಾಯಕರಲ್ಲೂ ನನ್ನ ವಿನಂತಿ ಏನೆಂದರೆ ನೀವು 5 ಲಕ್ಷ ರೂಪಾಯಿ

ಕೊಟ್ಟಿಲ್ಲ ಎಲ್ಲಾ ತರಹದ ಅಡ್ಜಸ್ಟ್‌ಮೆಂಟ್ ಎರಡೂವರೆ ಲಕ್ಷದ ಮೇಲೆ ಹೋಗಲ್ಲ ಎನ್ನುವುದು ನಿಮ್ಮ ಪ್ರಶ್ನೆ. ಅವರು ಕೊಟ್ಟಿದ್ದೇವೆಂದು ಹೇಳುತ್ತಾರೆ. ಕೊನೆಗೆ ಏನು ಹೇಳಿದರು ಎಲ್ಲಾ ಅಂಕಿ ಅಂಶಗಳನ್ನು ತರಿಸಿ ನೋಡಿ ನಾನು ನಿಖರವಾದ ಉತ್ತರವನ್ನು ಕೊಡುತ್ತೇನೆಂದು ಹೇಳಿದ್ದಾರೆ. ಆದ್ದರಿಂದ ಮುಂದಿನ ವಾರ ಅವರದ್ದು ಪ್ರಶ್ನೋತ್ತರ ಇದೆ. ಆದನ್ನು ಆಗ ಚರ್ಚೆ ಮಾಡೋಣ. ಈಗ ಈ ಪ್ರಶ್ನೆಯನ್ನು ತಡೆ ಹಿಡಿದು ಉತ್ತರವನ್ನು ಅವತ್ತು ಕೊಡಿಸುತ್ತೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ : ಬಜೆಟ್‌ಗೆ ಉತ್ತರ ಕೊಡುತ್ತಾರಲ್ಲ ಸಾರ್ ಆಗ ಕೊಡಿಸಿ.

ಅಧ್ಯಕ್ಷರು : ಉತ್ತರ ಕೊಡಬೇಕಾದುದು ಸರ್ಕಾರದ ಕರ್ತವ್ಯ. ಏನಾದರೂ ಲೋಪದೋಷಗಳು ಆಗಿದ್ದರೆ ಅದನ್ನು ಸರಿಪಡಿಸಿಕೊಳ್ಳತಕ್ಕದ್ದು. . .

ಶ್ರೀ ಬಿ.ಎಸ್.ಯಡಿಯೂರಪ್ಪ : ನಾನು ಹೇಳುತ್ತಿದ್ದೇನೆ, ಇಲ್ಲಿರುವಂತಹ ಆ ಕಡೆ ಈ ಕಡೆ ಎಲ್ಲಾ ಶಾಸಕರಿಗೂ ಗೊತ್ತಿರುವಂತಾದ್ದು ಕೆಪಿಟಿಸಿಎಲ್ ಅಡ್ಜಸ್ಟ್‌ಮೆಂಟ್ ಸೇರಿ ಒಟ್ಟು ಎರಡೂವರೆ ಲಕ್ಷ ಮಾತ್ರ ನಿಮ್ಮ ಕ್ಷೇತ್ರವೂ ಸೇರಿ. ಅಡ್ಜಸ್ಟ್ ಆಗಿದೆ ಈ ವರ್ಷವೂ ಅಷ್ಟೇ ಆಗಿದೆ. ಆ ಸಾಮಾನ್ಯ ಜ್ಞಾನ ಮಹದೇವಪ್ಪನವರಿಗೆ ಇಲ್ಲ ಅಂತ ಅಲ್ಲ. ಯಾರನ್ನು ರಕ್ಷಣೆ ಮಾಡುವುದಕ್ಕೆ ಹೊರಟಿದ್ದೀರಿ? ಎಂ.ಪಿ.ಪ್ರಕಾಶ್ ಗ್ರಾಮೀಣ ಅಭಿವೃದ್ಧಿ ಸಚಿವರಾಗಿದ್ದರು ಅವರು ಗೊತ್ತಿರುವಂತಹವರು. ತಾವು ಹೇಳಿ ಸಾರ್ ನೋಡೋಣ.

ಶ್ರೀಎಂ.ಪಿ. ಪ್ರಕಾಶ್ : (ಮಾನ್ಯ ಕಂದಾಯ ಸಚಿವರು) ಮಾನ್ಯ ಅಧ್ಯಕ್ಷರೇ ಈಗ ಈ ಅಂಕಿಸಂಖ್ಯೆಗಳ ಮೇಲೆ ಗೊತ್ತಾಗುತ್ತದೆ. ಹಣಕಾಸು ವಿಲೇವಾರಿ ಮಾಡತಕ್ಕಂಥಾದ್ದು ಮತ್ತು ಕೊಡತಕ್ಕಂಥಾದ್ದರಲ್ಲಿ ವಿಳಂಬವಾಗಿದೆ. ಅದನ್ನು ನಾವು ಪ್ರಾಂಜಲ ಮನಸ್ಸಿನಿಂದ ಒಪ್ಪಿಕೊಳ್ಳುತ್ತೇವೆ. ಮಾನ್ಯ ಉಪಮುಖ್ಯಮಂತ್ರಿಗಳಜೊತೆಗೆ ಮಾನ್ಯ ಸಚಿವರು ನಾನು ಮಾತನಾಡಿ ಈ ತಿಂಗಳೊಳಗಾಗಿಯೇ ಅದನ್ನು ಬಿಡುಗಡೆ ಮಾಡತಕ್ಕಂಥಾದ್ದನ್ನು ಮಾಡುತ್ತೇವೆ.

ಅಧ್ಯಕ್ಷರು : ಆಯಿತು ಬಿಡಿ ಮತ್ತೆ. ಮಹದೇವಪ್ಪನವರೇ ದಯಮಾಡಿ ಕುಳಿತುಕೊಳ್ಳಿ.

ಡಾ: ಹೆಚ್.ಸಿ.ಮಹದೇವಪ್ಪ : ಮಾನ್ಯ ಅಧ್ಯಕ್ಷರೇ, ನಾವು ಇದರ ಬಗ್ಗೆ overall decision ವೊಂದನ್ನು ಮಾಡಿದ್ದೇವೆ. ಆ decision ಪ್ರಕಾರ ಕಟ್ಟಿರುವ ಪಂಚಾಯಿತಿಗಳಿಗೆ re-appropriate ಮಾಡಿ ಅವರಿಗೆ ಬರಬೇಕಾದಂತಹ ಹಣವನ್ನು ಕೊಡುತ್ತೇವೆ.

ಶ್ರೀ ಬಿ.ಎಸ್.ಯಡಿಯೂರಪ್ಪ : ತಮಗೆ ಮಾನ್ಯ ಸದಸ್ಯರ ಪ್ರಶ್ನೆ ಗೊತ್ತಾಯಿತೆಂದು ಭಾವಿಸುತ್ತೇನೆ. ನಮ್ಮ ಉಡುಪಿ ಶಾಸಕರ ಪ್ರಾರ್ಥನೆ ಏನೆಂದರೆ, ಅಲ್ಲಿ ಕೆಪಿಟಿಸಿಎಲ್‌ಗೆ ಪಂಚಾಯಿತಿಯಿಂದಲೇ ದುಡ್ಡು ಕಟ್ಟಿದ್ದಾರೆ, ಇವರು ಕಣ್ಣು ಮುಚ್ಚಿಕೊಂಡು ಬೇರೆ ಕಟ್ಟಿದಿರುವ ಗ್ರಾಮ ಪಂಚಾಯಿತಿಗಳಿಗೆ ಹಣವನ್ನು ಬಿಡುಗಡೆಮಾಡುವಾಗ ಯಾವ ರೀತಿಯಾಗಿ ಮುರಿದುಕೊಂಡರೋ, ಅದೇ ರೀತಿಯಲ್ಲಿ ಅವರ ಪಂಚಾಯಿತಿಯ ಹಣವನ್ನೂ ಸಹ ಮುರಿದುಕೊಂಡಿದ್ದಾರೆ. ಅದನ್ನು ವಾಪಸ್ ಕೊಡಿ ಎಂದು ನಾವು ಹೋದ ಅಧಿವೇಶನದಲ್ಲೇ ಕೇಳಿದ್ದೆವು. ಪ್ರಾಮಾಣಿಕವಾಗಿ ಕಟ್ಟಿರುವವರಿಗೂ ಸಹ ನೀವು ಕಟ್ ಮಾಡುತ್ತಿರಾ? ಇದು ಒಂದು ಸರ್ಕಾರ ನಡೆಸುವ ರೀತಿಯೇ?

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : It is not proper ಇದು ಸರಿಯಲ್ಲ.

ಶ್ರೀ ಅರಗ ಜ್ಞಾನೇಂದ್ರ: ಆ ಚುನಾಯಿತ ಪ್ರತಿನಿಧಿಗಳ ಆಡಳಿತದ ಅವಧಿಯೇ ಮುಗಿದುಹೋಯಿತು. ಅವರು ಎಲೆಕ್ಷನ್‌ನಲ್ಲಿ ಸೋತರು.

ಅಧ್ಯಕ್ಷರು: ಮಾನ್ಯ ಸಚಿವರು ಈ ವಿಷಯದ ಬಗ್ಗೆ ಯೋಗ್ಯ ಕ್ರಮ ತೆಗೆದುಕೊಳ್ಳಬೇಕು.

ಡಾ: ಹೆಚ್.ಸಿ. ಮಹದೇವಪ್ಪ: re-appropriate ಮಾಡಿ ಆ ದುಡ್ಡನ್ನು ಅವರಿಗೆ ವಾಪಸ್ ಕೊಡುತ್ತೇವೆಂದು ನಾನು ಆಗಲೇ ಹೇಳಿದ್ದೇನೆ.

ಅಧ್ಯಕ್ಷರು: ಕೊಡಿಸುತ್ತೇವೆ ಎಂದು ಮಾನ್ಯ ಸಚಿವರು ಹೇಳಿದ್ದಾರೆ. ಇದನ್ನು ಇಲ್ಲಿಗೇ ಬಿಡಿ.

159 (2094) **ಶ್ರೀ ಸಿಂಧೂರ ಜಿ. ರಾಜಶೇಖರ** (ಶಿಗ್ಗಾಂವ್) ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :–

ಅ) ಸವಣೂರ ಹಾಗೂ ಶಿಗ್ಗಾಂವ ತಾಲ್ಲೂಕುಗಳಲ್ಲಿ ನಿರ್ಮಲ ಗ್ರಾಮೀಣ ಯೋಜನೆಯಲ್ಲಿ ಕಳೆದಮೂರು ವರ್ಷಗಳಲ್ಲಿ ಎಷ್ಟು ಹಣವನ್ನು ವೆಚ್ಚ ಮಾಡಲಾಗಿದೆ.